ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 4 ಚಾ ಸಾ 5

ಹೆಸರುಃ ದಾಕ್ಷಾಯಿಣಿ

ಗಂಡನ ಹೆಸರುಃ ಸುರೇಂದ್ರಕುಮಾರ್

ವಯಸ್ಸುಃ 50 ವರ್ಷ

ಉದ್ಯೋಗಃ ಹೋಟೇಲ್ ನಲ್ಲಿ ಕೆಲಸ

ವಾಸಃ ಬೆಲವತ್ತಮಂಟಿ.

ದಿಃ 23.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. ನನ್ನ ಗಂಡ ಸುರೇಂದ್ರಕುಮಾರ್ ನಾಲ್ಕು ವರ್ಷದ ಹಿಂದೆ ಮೃತಪಟ್ಟಿದ್ದಾರೆ. ನನ್ನ ಒಬ್ಬನೇ ಮಗ ಚಾಲಕನಾಗಿ ತನ್ನ ಹೆಂಡತಿಯ ಜೊತೆಯಲ್ಲಿ ಹುಣಸೂರಿನಲ್ಲಿ ವಾಸವಿದ್ದಾನೆ.

2. ನಾನು ಬೆಲವತ್ತಮಂಟಿಯಲ್ಲಿ ಚಂದ್ರು ಎನ್ನುವವರ

ಮನೆಯಲ್ಲಿ ಒಬ್ಬಳೇ ಬಾಡಿಗೆಗೆ ವಾಸ ಇದ್ದೇನೆ.

3. ನಾನು ಬೆಲವತ್ತಮಂಟಿಯಲ್ಲಿರುವ ಲಕ್ಷ್ಮೀ ಹೊಟೇಲ್ ನಲ್ಲಿ ಕೆಲಸ ಮಾಡಿಕೊಂಡು ಇದ್ದೇನೆ.

4. ನನ್ನ ಮನೆಯ ಮಾಲೀಕರಾದ ಚಂದ್ರುವಿಗೆ ಸೇರಿದ ಇನ್ನೊಂದು ಮನೆಗೆ ಈ ಪ್ರಕರಣದ ಆರೋಪಿ ಲಕ್ಷ್ಮಿ ನಾನು ಬಾಡಿಗೆಗೆ ಬರುವುದಕ್ಕಿಂತ ಒಂದು ವಾರದ ಹಿಂದೆ ಬಂದಿದ್ದರು.

5. ಸದಿರಿ ಲಕ್ಷ್ಮಿ ನನ್ನ ಬಳಿಗೆ ಬಂದು ನನ್ನ ಗಂಡ ಹೊರಗೆ ಹೋಗಿದ್ದಾರೆ, ಅವರ ಜೊತೆ ಮಾತನಾಡಲು ಒಂದು ಸಿಮ್ ತೆಗೆದುಕೊಡಿ ಎಂದು ಕೇಳಿದಳು. ಸದರಿ ಲಕ್ಷ್ಮಿ ನನ್ನ ಬಳಿ ಬಂದು ಆಕೆಯ ಆಧಾರ್ ಕಾರ್ಡ್ ವರ್ಕ್ ಆಗುತ್ತಿಲ್ಲ, ಈ ಕಾರಣಕ್ಕಾಗಿ ನೀವು ಒಂದು ಸಿಮ್ ಖರೀದಿ ಮಾಡಿಕೊಡಿ ಎಂದು ಕೇಳಿಕೊಂಡಿದ್ದಳು.

6. ಆರೋಪಿ ಲಕ್ಷ್ಮಿ ಹಣ ಕೊಟ್ಟ ಮೇರೆಗೆ ನಾನು ಮೈಸೂರಿನ ಹನುಮಂತ ನಗರದಲ್ಲಿ ಒಂದು ಮೊಬೈಲ್ ಅಂಗಡಿಯಿಂದ ಒಂದು ಸಿಮ್ ಖರೀದಿ ಮಾಡಿ ಆಕೆಗೆ ಕೊಟ್ಟಿರುತ್ತೇನೆ.

7. ಸದರಿ ಲಕ್ಷ್ಮಿಯ ಮನೆಯಲ್ಲಿ ಆಕೆ ಮತ್ತು ಆಕೆಯ ಇಬ್ಬರು ಮಕ್ಕಳು ಇದ್ದರು. ಆರೋಪಿ ಲಕ್ಷ್ಮಿ ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ.

8. ಒಂದು ದಿವಸ ಸಂಜೆ 6 ಗಂಟೆ ಆರೋಪಿ ಲಕ್ಷ್ಮಿ ನನ್ನ ಬಳಿಗೆ ಬಂದು ನನಗೆ ಗೊತ್ತಿರುವವರಿಗೆ ಹುಷಾರಿಲ್ಲ, ಅಲ್ಲಿಗೆ ಹೋಗಿ ನಾನು ಬೆಳಿಗ್ಗೆ ಬರುತ್ತೇನೆ, ಅಲ್ಲಿಯವರೆಗೆ ನನ್ನ ಮಕ್ಕಳನ್ನು ನೋಡಿಕೊಳ್ಳಿ ಎಂದು ತಿಳಿಸಿದಳು. ಅದಕ್ಕೆ ನಾನು ಬೆಳಿಗ್ಗೆ ಹೋಟೇಲ್ ಗೆ ಹೋಗಬೇಕು ಅಷ್ಟರಲ್ಲಿ ಬರುವುದಿದ್ದರೆ ಮಕ್ಕಳನ್ನು ಬಿಟ್ಟು ಹೋಗು ಎಂದು ತಿಳಿಸಿದೆ. ಅದಕ್ಕೆ ಆಕೆ ಸರಿ ನಾನು ಹೋಗಿ ಬರುತ್ತೇನೆ, ಮಕ್ಕಳನ್ನು ಇಟ್ಟುಕೊಂಡಿರಿ ಎಂದು ನನಗೆ ತಿಳಿಸಿ ಮನೆಯಿಂದ ಹೊರಟು ಹೋದಳು.

9. ಮರುದಿನ ಬೆಳಿಗ್ಗೆ 5 ಗಂಟೆಗೆ ಎದ್ದು ಮಕ್ಕಳನ್ನು ಎಬ್ಬಿಸಿ ಹಾಲು, ಬಿಸ್ಕೆಟ್ ಅನ್ನು ಕೊಟ್ಟು ನೀವು ಇಲ್ಲೇ ಇರಿ, ನಿಮ್ಮ ತಾಯಿ ಬರುತ್ತಾಳೆ ಎಂದು ಹೇಳಿ ನಾನು ಹೋಟೇಲ್ ಬಳಿಗೆ ಹೋದೆ.

10. ನಾನು ಬೆಳಿಗ್ಗೆ 6-30 – 7 ಗಂಟೆಗೆ ಲಕ್ಷ್ಮಿಗೆ ಫೋನ್ ಮಾಡಿದಾಗ ಆಕೆ ನಾನು ಮನೆಗೆ ಬಂದಿದ್ದೇನೆ, ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದೇನೆ, ನಿಮ್ಮ ಮನೆಯ ಬೀಗವನ್ನು ಸ್ವಿಚ್ ಬೋರ್ಡ್ ಮೇಲೆ ಇಟ್ಟಿರುತ್ತೇನೆ ಎಂದು ಹೇಳಿ ಹೊರಟು ಹೋಗಿರುತ್ತಾಳೆ. ಅದಾದನಂತರ ನಾನು ಆರೋಪಿ ಲಕ್ಷ್ಮಿಯನ್ನು ನೋಡಿರುವುದಿಲ್ಲ.

11. ಆರೋಪಿಗೆ ನಾನು ನನ್ನ ಹೆಸರಿನಲ್ಲಿ ಸಿಮ್ ತೆಗೆದುಕೊಟ್ಟಿರುತ್ತೇನೆ. ನಾನು ಕೊಟ್ಟ ಸಿಮ್ ನ ಕೊನೆಯ ನಂಬರ್ 355.

12. ಈ ಎಲ್ಲಾ ವಿಚಾರವನ್ನು ನಾನು ಈ ಹಿಂದೆ ಪೊಲೀಸಿನವರ ಬಳಿ ಮತ್ತು ನ್ಯಾಯಾಧೀಶರ ಮುಂದೆ ತಿಳಿಸಿರುತ್ತೇನೆ.

13. ಆನಂತರ ಪೊಲೀಸರು ಕರೆದುಕೊಂಡು ಬಂದಾಗ ಸದರಿ ಆರೋಪಿ ಲಕ್ಷ್ಮಿ ಆಕೆಯ ಕಡೆಯವರನ್ನು ಕೊಲೆ ಮಾಡಿದ್ದಾರೆ ಎಂಬ ವಿಚಾರ ತಿಳಿದು ಬಂತು.

14. ಪೊಲೀಸರು ವಿಚಾರಿಸಿದಾಗ ಲಕ್ಷ್ಮಿಗೆ ನಾನೇ ಸಿಮ್ ಖರೀದಿ ಮಾಡಿಕೊಟ್ಟಿದ್ದೇನೆ ಎಂದು ತಿಳಿಸಿರುತ್ತೇನೆ. ನಾನು ಆ ರೀತಿ ಸಿಮ್ ಅನ್ನು ತೆಗೆದುಕೊಟ್ಟ ನಂತರದಲ್ಲಿ ಸದರಿ ಸಿಮ್ ಅನ್ನು ಆರೋಪಿ ಲಕ್ಷ್ಮಿ ಉಪಯೋಗಿಸುತ್ತಿದ್ದಳು.

**ಆರೋಪಿಯ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದ ಕಲಂ 231(2) ರನ್ವಯ ಸಲ್ಲಿಸಲಾದ ಅರ್ಜಿಯಲ್ಲಿ ಮಾಡಿದ ಆದೇಶಕ್ಕನುಗುಣವಾಗಿ ಮುಂದೂಡಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

ಈ ದಿನ ದಿಃ 27.6.2023 ರಂದು ಸಾಕ್ಷಿ ಕರೆಸಿ ಪ್ರಮಾಣೀಕರಿಸಲಾಯಿತು.

<u>ಆರೋಪಿಯ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದ</u>

15. ನನ್ನ ಗಂಡ ಹುಣಸೂರಿನಲ್ಲಿ ಮೃತಪಟ್ಟಿದ್ದಾರೆ . ನಾನು ಮೈಸೂರಿಗೆ ಬಂದು ಐದು ವರುಷವಾಯಿತು. ನನ್ನ ಗಂಡ ಮೃತಪಟ್ಟನಂತರದಲ್ಲಿ ನಾನು ಮೈಸೂರಿಗೆ ಬಂದಿರುತ್ತೇನೆ.

16. ನಾನು ಮೈಸೂರಿಗೆ ಬಂದ ನಂತರದಲ್ಲಿ ನನ್ನ ಮೈಸೂರಿನ ವಿಳಾಸವನ್ನು ಕೊಡುತ್ತಿದ್ದೆ. ಬೆಳವತ್ತ ಮಂಟಿಗೆ ಲಕ್ಷ್ಮಿ ವಾಸಿಸಲು ಬಂದ ಒಂದು ವಾರದ ನಂತರ ನಾನು ಕೂಡ ಬೆಳವತ್ತ ಮಂಟಿಗೆ ಬಂದಿರುತ್ತೇನೆ.

17.ನಾನು ಬೆಳಗ್ಗೆ 6 ಗಂಟೆಗೆ ಹೊಟೆಲ್ ಕೆಲಸಕ್ಕೆ ಹೋದರೆ ಸಂಜೆ 6.30 ಗಂಟೆಗೆ ಮನೆಗೆ ಬರುತ್ತೇನೆ. ನನ್ನ ಮನೆಯಿಂದ 10 ಹೆಜ್ಜೆ ದೂರದಲ್ಲಿ ನಾನು ಕೆಲಸ ಮಾಡುವ ಹೋಟೆಲ್ ಇದೆ.

18. ನಾನು ಸಂಜೆ ಮನೆಗೆ ಬಂದಾಗ ನೆರೆಹೊರೆಯವರಾದ್ದರಿಂದ ಲಕ್ಷ್ಮಿ ಜೊತೆಯಲ್ಲಿ ಮಾತನಾಡುತ್ತಿದ್ದೆ. ಲಕ್ಷ್ಮಿಯ ತಾಯಿಯ ಮನೆ ಎಲ್ಲಿ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಲಕ್ಷ್ಮಿಯ ಗಂಡ ಹೊರರಾಜ್ಯಕ್ಕೆ ಕೆಲಸಕ್ಕೆ

ಹೋಗುತ್ತಾರೆ ಎಂದು ಮಾತ್ರ ನನಗೆ ಗೊತ್ತಿತ್ತು. ಲಕ್ಷ್ಮಿ ಮತ್ತು ಆಕೆಯ ಗಂಡ ಪರಸ್ಪರ ಮಾತನಾಡುತ್ತಿದುದನ್ನು ನಾನು ನೋಡಿರುವುದಿಲ್ಲ.

19. ನಿನ್ನ ಗಂಡ ಹೊರರಾಜ್ಯಕ್ಕೆ ಕೆಲಸಕ್ಕೆ ಹೋದಾಗ ಮನೆಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನೀನು ಅವರನ್ನು ಹೇಗೆ ಸಂಪರ್ಕಿಸುತ್ತೀಯಾ ಎಂದು ನಾನು ಲಕ್ಷ್ಮಿ ಯನ್ನು ಯಾವತ್ತು ವಿಚಾರಿಸಿಲ್ಲ.

20. ನಾನು ನೋಡಿದ ಹಾಗೆ ಲಕ್ಷ್ಮಿಯ ಬಳಿ ಪೋನು ಇತ್ತು. ಆಕೆ ಆ ಪೋನಿನಿಂದ ಮಾತನಾಡುತ್ತಿದ್ದಳು. ಲಕ್ಷ್ಮಿ ಉಪಯೋಗಿಸುತ್ತಿದ್ದ ಸಿಮ್ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ.

21. ನಿನ್ನಲ್ಲಿ ಮೊದಲೇ ಸಿಮ್ ಇದೆ , ನಾನು ಯಾಕೆ ನಿನಗೆ ಸಿಮ್ ತೆಗೆದುಕೊಡಲಿ ಎಂದು ನಾನು ಲಕ್ಷ್ಮಿಯನ್ನು ಕೇಳಿಲ್ಲ. ನಾನು ಸಿಮ್ ಖರೀದಿ ಮಾಡಿದ ಸಂಬಂಧವಾಗಿ ರಶೀದಿಯನ್ನು ಪೊಲೀಸರಿಗೆ ಕೊಟ್ಟಿಲ್ಲ ಕಾರಣ ಅಂತಹ ರಶೀದಿಯನ್ನು ಕಂಪನಿಯವರು ನನಗೆ ಕೊಟ್ಟಿಲ್ಲ.

22. ಯಾವ ಅಂಗಡಿಯಲ್ಲಿ ಸಿಮ್ ಖರೀದಿಸಿದ್ದೇನೆ ಎಂದು ಅಂಗಡಿಯನ್ನು ಪೊಲೀಸರಿಗೆ ತೋರಿಸಿಲ್ಲ.

23. ನಾನು ಯಾವತ್ತು ಲಕ್ಷ್ಮಿಗೆ ಪೋನು ಮಾಡಿಲ್ಲ. ಲಕ್ಷ್ಮಿಯು ಉಪಯೋಗಿಸುತ್ತಿದ್ದ ಪೋನು ನಂಬರನ್ನು ನಾನು ನನ್ನ ಪೊನಿನಲ್ಲಿ ಸೇವ್ ಮಾಡಿಕೊಂಡಿರಲಿಲ್ಲ.

24. ನನ್ನ ಚಿಕ್ಕಮ್ಮನಿಗೆ ಹುಷಾರಿಲ್ಲ ನನ್ನ ಮಕ್ಕಳನ್ನು ನೀನು ನೋಡಿಕೊಂಡು ಇರು ನನಗೆ ತಿಳಿಸಿದ್ದಾಳೆ. ಹುಡುಗನ ವಯಸ್ಸು ಅಂದಾಜು 7 ವರುಷ , ಹುಡುಗಿನ ವಯಸ್ಸು ಅಂದಾಜು 5 ವರುಷ ಅವರು ಶಾಲೆಗೆ ಹೋಗುತ್ತಿದ್ದರು.

25. ಲಕ್ಷ್ಮಿ ಯ ಮಕ್ಕಳ ಹೆಸರನ್ನು ತಿಳಿಸಲು ನನಗೆ ಗೊತ್ತಿಲ್ಲ.

26. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿಲ್ಲ.

27. ನ್ಯಾಯಾಲಯಕ್ಕೆ ಬಂದು ಹೇಳಿಕೆಯನ್ನು ಕೊಟ್ಟ ನಂತರದಲ್ಲಿ ನಾನು ಪೊ.ಠಾಣೆಗೆ ಹೋಗಿಲ್ಲ.

28.ನಾನು ನನ್ನ ಮರುಹೇಳಿಕೆಯನ್ನು ನೀಡುವಾಗ ನ್ಯಾಯಾಧೀಶರ

ಮುಂದೆ ಕೊಟ್ಟ ಹೇಳಿಕೆಯಲ್ಲಿ ದಿಃ6.2.2022 ರಂದು ಸಂಜೆ 6.15 ಗಂಟೆಗೆ ಬಿಟ್ಟು ಹೋದಳು ಎಂದು ತಪ್ಪಾಗಿ ಹೇಳಿರುತ್ತೇನೆ , ಸರಿಪಡಿಸಿಕೊಳ್ಳಲು ಕೋರಿಕೆ ಎಂದು ತನಿಖಾಧಿಕಾರಿಗೆ ತಿಳಿಸಿಲ್ಲ.

29. ಲಕ್ಷ್ಮಿ ಮಕ್ಕಳನ್ನು ಬಿಟ್ಟು ಹೋದ ನಂತರದಲ್ಲಿ ಮೊದಲಬಾರಿಗೆ ನಾನು ಆಕೆಯನ್ನು ಪೊಲೀಸರು ನಮ್ಮ ಮನೆಯ ಬಳಿ ಕರೆದುಕೊಂಡು ಬಂದಾಗ ನೋಡಿರುತ್ತೇನೆ.

30. ಆ ರೀತಿ ಮಕ್ಕಳನ್ನು ಬಿಟ್ಟು ಹೋದ ನಂತರ ಮರು ದಿವಸ ಬೆಳಗ್ಗೆ ಲಕ್ಷ್ಮಿ ನಮ್ಮ ಮನೆಗೆ ಬಂದು ಮಕ್ಕಳನ್ನು ಕರೆದುಕೊಂಡು ಹೋಗಿದ್ದಾಳೆ. ಅದೇದಿವಸ ರಾತ್ರಿ ಪೊಲೀಸರು ಲಕ್ಷ್ಮಿಯನ್ನು ಕರೆದುಕೊಂಡು ನಮ್ಮ ಮನೆಯ ಬಳಿಗೆ ಬಂದಿದ್ದಾರೆ.

31. ನನ್ನಿಂದ ಯಾವುದೇ ಸಿಮ್ ಅನ್ನು ಲಕ್ಷ್ಮಿ ತೆಗೆದುಕೊಂಡಿಲ್ಲ ಮತ್ತು ಅದರ ಅವಶ್ಯಕತೆ ಆಕೆಗೆ ಇರಲಿಲ್ಲ ಎನ್ನುವುದು ಸರಿಯಲ್ಲ. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ . ನಾನು ಕನ್ನಡವನ್ನು ಓದುತ್ತೇನೆ. ಲಕ್ಷ್ಮಿಗೆ ಕೊಟ್ಟ ಮೊಬೈಲು ಸಂಖ್ಯೆಯನ್ನು ಮರೆತಿರುತ್ತೇನೆ. ನ ಾನು ತೆಗೆದುಕೊಟ್ಟ ಸಿಮ್ ನಂಬರಿಗೆ ನಾನು ಪೋನು ಮಾಡಿಲ್ಲ.

32. ಆ ರೀತಿ ಲಕ್ಷ್ಮಿ ಯಾವುದೇ ಸಿಮ್ ಅನ್ನು ನನ್ನಿಂದ ಪಡೆದುಕೊಂಡಿಲ್ಲ ಮತ್ತು ಆ ಸಿಮ್ಮಿಂದ ಆಕೆ ಯಾರೊಂದಿಗೂ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

33. ಪೊಲೀಸರು ಹೇಳಿಕೊಟ್ಟಂತೆ ಅವರ ಒತ್ತಾಸೆಯ ಮೇರೆಗೆ ನಾನು ನ್ಯಾಯಾಧೀಶರ ಮೇರೆಗೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಈಗಲೂ ನಾನು ಪೊಲೀಸರ ಒತ್ತಾಸೆಗೆ ಮಣಿದು ಸಿಮ್ ತೆಗೆದುಕೊಟ್ಟಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

34. ನನ್ನ ಮೊಬೈಲು ಸಂಖ್ಯೆಯನ್ನು ಹೊರತುಪಡಿಸಿ ಬೇರೆಯವರ ಮೊಬೈಲ್ ಸಂಖ್ಯೆಯನ್ನು ತಿಳಿಸುವ ಶಕ್ತಿ ನನಗೆ ಇಲ್ಲ.

ಮರು ವಿಚಾರಣೆ : ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)